


ಹಿಂದಕ್ಕೆ ಚಾಚಿ ಕಣ್ಣುಮುಚ್ಚಿ ಕುಳಿತ ಆತನನ್ನು ನೋಡಿದ್ದೇ ಸಾಂಬಮೂರ್ತಿಗೆ ಯಾಕೋ ಅವನ ಬಗ್ಗೆ ಕರುಳು ಚುರ್‍ರೆಂದಿತು. ಯಾಕೋ ಹುಡುಗ ನೋಯುತ್ತಿದ್ದಾನೆ. ಅದು ಕೇವಲ ಅಪ್ಪನ ಅಸೌಖ್ಯದ ಕುರಿತಾದ ನೋವಲ್ಲ; ಒಳಗಿನದೆಲ್ಲ ಅವನ ಮುಖದಲ್ಲಿ ಸ್ಥಾಯಿಗೊಂಡಿದೆ ಅನ್ನಿಸಿತು. ತನ್ನ ಮಗನಿಗಿಂತ ಸ್ವಲ್ಪ ಚಿಕ್ಕವನಿರಬಹುದಾದ ಅವನನ್ನು ನೋಡಿದಾಗಿನಿಂದ ಯಾಕೋ ಅವನು ಆಪ್ತ ಅನ್ನಿಸಿಬಿಟ್ಟಿದ್ದ.

ಹತ್ತಿರ ಬಂದು ಕೂತು ಕಣ್ಮುಚ್ಚಿಕೊಂಡಿದ್ದ ಅವನ ಹಣೆ ಸವರಿದರು. ಚೂರು ಬಿಸಿಯಾದ ಹಣೆಯಲ್ಲಿ ಬೆವರಿನ ಹನಿಗಳಿದ್ದವು. ಅವರ ಹಸ್ತದ ನೇವರಿಕೆಗೆ ಬೆಚ್ಚಿದವನಂತೆ ಕಣ್ತೆರೆದು ನೆಟ್ಟಗೆ ಕುಳಿತ. ಸಾಂಬಮೂರ್ತಿಗಳ ದೃಷ್ಟಿ ತಪ್ಪಿಸಿ ಅತ್ತಿತ್ತ ನೋಡಿದ. ಮನಸ್ಸಿನಿಂದ ಉಮ್ಮಳಿಸಿ ಬರುತ್ತಿದ್ದ ಅನಿಸಿಕೆಗಳು ಧ್ವನಿಯಾಗಿಬಿಡುವ ಭಯ ಅವನಿಗಾಗುತ್ತಿತ್ತು. ಹೇಳಿಕೊಳ್ಳಬೇಕು ಎಂದು ಎದೆಗೊತ್ತುತ್ತಿದ್ದ ಒತ್ತಡವನ್ನು ಅಷ್ಟೇ ಶಕ್ತಿಯಿಂದ ಹಿಂದಕ್ಕೆ ತಳ್ಳುತ್ತಿದ್ದ. ಅವನಲ್ಲಾಗುತ್ತಿದ್ದ ಘರ್ಷಣೆಯನ್ನು ಅರ್ಥಮಾಡಿಕೊಂಡವರಂತೆ ಸಾಂಬಮೂರ್ತಿ, 'ತಗೋ, ನೀರು ಕುಡಿ' ಎಂದು ನೀರಿನ ಬಾಟ್ಲಿ ಕೊಟ್ಟರು.

ತುಸು ಹೊತ್ತಿನ ನಂತರ ಸುಧಾರಿಸಿಕೊಂಡ ಸುಲೇಖ ತಳಮಳವನ್ನು ಶಮನಗೊಳಿಸಲೆಂಬಂತೆ, 'ಅಂಕಲ್, ನಿಮ್ಮ ನಡವಳಿಕೆ ನಂಗೆ ಕುತೂಹಲ ಹುಟ್ಟಿಸಿದೆ. ನಿಜ ಹೇಳಬೇಕು ಅಂದ್ರೆ ಒಂಥರಾ...' ಮಾತನ್ನು ಅಲ್ಲಿಗೇ ನಿಲ್ಲಿಸಿದ.

ಅದಕ್ಕೆ ಸಾಂಬಮೂರ್ತಿ ಕಿರುನಗೆ ನಕ್ಕು, 'ಹೌದು, ನಿನಗೇನನ್ನಿಸಿತು ಗೊತ್ತಾಯ್ತು. ನನ್ನದು ವಿಚಿತ್ರ ಬದುಕು. ಅದರ ಬಗ್ಗೆ ಚೂರು ಹೇಳಿಬಿಡ್ತೀನಿ. ಮತ್ತಷ್ಟು ವಿಚಿತ್ರವಾಗಿ ಕಾಣಬಹುದು. ಒಳ್ಳೇ ನೌಕರಿ, ಕೈ ತುಂಬ ಸಂಬಳ, ಸಾಧ್ವಿ ಹೆಂಡತಿ, ಒಂದು ಗಂಡು, ಇನ್ನೊಂದು ಹೆಣ್ಣು, ಚುರುಕಾದ ಇಬ್ಬರು ಮಕ್ಕಳು. ಎಲ್ಲ ಸರಿ ಇತ್ತು. ಮಕ್ಕಳಿಬ್ಬರನ್ನೂ ಚೆನ್ನಾಗಿ ಓದಿಸಿದೆವು. ಅವರೂ ಅಷ್ಟೇ ಶ್ರದ್ಧೆಯಿಂದ ಓದಿ, ಮಲ್ಟಿನ್ಯಾಶನಲ್ ಕಂಪನಿಗೆ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿದ್ದರು. ಅಲ್ಲಿವರೆಗೆ ನೆಮ್ಮದಿಯಿಂದ ಇದ್ದ ಸಂಸಾರ ನಿಧಾನಕ್ಕೆ ಕಂಪಿಸತೊಡಗಿತು. ನಾವು ಹಳೆಕಾಲದವರಲ್ವಾ? ಹೊಸ ಜಗತ್ತು ನಮಗೆ ತೊಡಕಾಗತೊಡಗಿತು.